ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

DEPARTMENT / SUBJECT: ಉಪ ಸಭಾಧ್ಯಕ್ಷರು

NAME OF THE NEWS PAPER: ವಿಜಯವಾಣಿ ದಿನಾಂಕ : DATE : 17/11/2017

# ಹಕ್ಕುಚ್ಯುತಿ ಮಂಡಿಸುವೆ ಎಂದ ಡೆಪ್ಯೂಟಿ ಸ್ಪೀಕರ್

ಬೆಂಗಳೂರು: ಭೂಗಳ್ಳರ ಪರ ನಿಲುವು ತಳೆದಿದ್ದೇನೆ ಎಂಬ ಆರೋಪ ಮಾಡಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿ, ಹಕ್ಕುಚ್ಯುತಿ ಮಂಡನೆ ಮಾಡುತ್ತೇನೆ ಎಂದು ಡೆಪ್ಯೂಟಿ ಸ್ಪೀಕರ್ ಕೃಷ್ಣಾರೆಡ್ಡಿ ತಿಳಿಸಿದ್ದಾರೆ. ನನ್ನ ಮೇಲೆ ಮಾಡಿರುವ ಆರೋಪಗಳೆಲ್ಲವೂ ಸತ್ಯಕ್ಕೆ ದೂರವಾದದ್ದು ಎಂದು ಶನಿವಾರ



ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಬಿಜೆಪಿ ವಕ್ತಾರ ಎನ್.ಆರ್. ರಮೇಶ್ ಮಾಡಿರುವ ಆರೋಪಗಳಲ್ಲಿ ಸತ್ಯಾಂಶವಿಲ್ಲ. ಬೆಂಗಳೂರಿನ ಕತ್ತರಿಗುಪ್ಪೆ ಬಳಿಯ ಸರ್ಕಾರಿ ಜಾಗದ ಸಂಬಂಧ ದೂರು ಬಂದಿತ್ತು. ಇದನ್ನು ನಿಯಮಾನುಸಾರ ಅರ್ಜಿ ವಿಲೇಗೆ ಕ್ರಮ ಕೈಗೊಂಡಿದ್ದೇವೆ ಎಂದರು. ರಾಜಕೀಯ ಷಡ್ಯಂತ್ರಕ್ಕಾಗಿ ಇಂಥ ಆರೋಪ ಮಾಡಲಾಗಿದೆ. ಯಾವುದೇ ದಾಖಲೆ ಇಲ್ಲದೆ ಆರೋಪ ಮಾಡುವಂತ ಕೆಟ್ಟ ರಾಜಕಾರಣ ಕೈ ಬಿಡಬೇಕು ಎಂದರು. ನಾನು ಪ್ರಾಮಾಣಿಕವಾಗಿ ಹೋರಾಟ ಮಾಡಿಕೊಂಡು ಸಾರ್ವಜನಿಕ ಸೇವೆಗೆ ಬಂದವನು. ಸರ್ಕಾರಿ ಆಸ್ತಿ ರಕ್ಷಣೆ ಹೊಣೆ ನನ್ನ ಮೇಲಿದೆ ಎಂದು ಕೃಷ್ಣಾರೆಡ್ಡಿ ಸಮರ್ಥಿಸಿಕೊಂಡರು. ಬಾಯಿ ಚಪಲಕ್ಕಾಗಿ ಆರೋಪ ಮಾಡ್ತಿರುವ ರಮೇಶ್ ಅವರನ್ನು ಸುಮ್ಮನೆ ಬಿಡಲ್ಲ ಎಂದು ಗುಡುಗಿದರು.

2